## ತಲೆ ಬೋಳಾಗುವುದೇಕೆ?

ಕ್ಯಾನ್ಸರ್ ಚಿಕಿತ್ಸೆಯ ಭಾಗವಾಗಿರುವ ಕಿಮೋಥೆರಪಿಯ ಅಡ್ಡ ಪರಿಣಾಮವಾಗಿ ತಲೆಗೂದಲು ಉದುರುತ್ತದೆ. ಹಾಗೆಂದು ಈ ಚಿಕಿತ್ಸೆಗೆ ಒಳಗಾಗುವ ಎಲ್ಲರೂ ಕೂದಲನ್ನು ಕಳೆದುಕೊಳ್ಳುವುದಿಲ್ಲ. ಮೊದಲ ಕಿಮೋ ಸೆಷನ್ ನಂತರ ಅಥವಾ ನಾಲ್ಕು ವಾರಗಳ ವಿಕಿರಣ ಚಿಕಿತ್ಸೆಯ ನಂತರ ಒಂದರಿಂದ ನಾಲ್ಕು ವಾರಗಳವರೆಗೆ ಕೂದಲು ಉದುರಲಾರಂಭಿಸುತ್ತದೆ. ಗುಣಮುಖರಾದ ಮೇಲೆ ಕೆಲವರಿಗೆ ಮತ್ತೆ ಸಣ್ಣದಾಗಿ ತಲೆಗೂದಲು ಬೆಳೆಯಲಾರಂಭಿಸುತ್ತದೆ. ಆದರೂ ಮಹಿಳೆಯರು ತಲೆಗೂದಲಿಲ್ಲದೆ ಹೊರಗೆ ಓಡಾಡಲು ಹಿಂಜರಿಯುತ್ತಾರೆ. ಮೊದಲೇ ದೈಹಿಕ–ಮಾನಸಿಕವಾಗಿ ಜರ್ಜರಿತರಾಗಿರುವವರಿಗೆ ಬೋಳು ತಲೆ ಇನ್ನಷ್ಟು ಬೇಸರ ತರಿಸುತ್ತದೆ.

ಪುರುಷರಾದರೆ ತಲೆಬೋಳಾದರೂ ತಲೆಕೆಡಿಸಿಕೊಳ್ಳುವುದಿಲ್ಲ. ಟೋಪಿ ಹಾಕಿಕೊಂಡೋ, ಸ್ಕಾರ್ಫ್ ಸುತ್ತಿಕೊಂಡೋ ಬೋಳುತಲೆಯನ್ನು ಮರೆಮಾಚಿಕೊಳ್ಳುತ್ತಾರೆ. ಆದರೆ ಮಹಿಳೆಯರ ತಲೆಯಲ್ಲಿನ ಕೂದಲು ಅವರ ಸೌಂದರ್ಯ ವೃದ್ಧಿಸುವುದಲ್ಲದೆ ಆತ್ಮವಿಶ್ವಾಸವನ್ನೂ ಹೆಚ್ಚಿಸುತ್ತದೆ. ಅಂಥವರಿಗಾಗಿ ವಿಗ್‌ಗಳನ್ನು ಮಾಡಲಾಗುತ್ತದೆ. ಈ ವಿಗ್‌ಗಳಿಗೆ ನೈಸರ್ಗಿಕ ತಲೆಗೂದಲಿನ ಅಗತ್ಯವಿದೆ.

## ಸ್ವಯಂ ಸೇವಾಸಂಸ್ಥೆಗಳ ಸಹಾಯಹಸ್ತ

ಅಂಗಡಿಗಳಲ್ಲಿ ದೊರಕುವ ವಿಗ್‌ಗಳು ಸಾಮಾನ್ಯವಾಗಿ ದುಬಾರಿ. ಮೊದಲೇ ಕ್ಯಾನ್ಸರ್ ಚಿಕಿತ್ಸೆಗಾಗಿ ಲಕ್ಷಗಟ್ಟಲೆ ಹಣ ವ್ಯಯಿಸಿ ಬರಿಗೈಯಲ್ಲಿ ಇರುವ ಅನೇಕರಿಗೆ ದುಬಾರಿ ಹಣ ತೆತ್ತು ವಿಗ್ ಖರೀದಿಸುವ ಶಕ್ತಿ ಇರುವುದಿಲ್ಲ. ಇಂಥವರಿಗಾಗಿಯೇ ಅತ್ಯಂತ ಕಡಿಮೆ ವೆಚ್ಚದಲ್ಲಿ ವಿಗ್ ಮಾರಾಟ ಮಾಡುವ ಅಥವಾ ಉಚಿತವಾಗಿಯೇ ನೀಡುವ ಹಲವು ಸಂಸ್ಥೆಗಳಿವೆ. ಇವರಿಗೆ ತಲೆಗೂದಲನ್ನು ದಾನ ಮಾಡಬಹುದು. ಸಾಮಾನ್ಯವಾಗಿ ಎಂಟರಿಂದ 14 ಇಂಚುಗಳವರೆಗೆ ತಲೆಗೂದಲನ್ನು ದಾನವಾಗಿ ನೀಡಬೇಕಾಗುತ್ತದೆ.

ಕೆಲವೊಂದು ಸ್ವಯಂ ಸೇವಾಸಂಸ್ಥೆಗಳು ವಿಗ್ ಅನ್ನು ತಯಾರಿಸಿ ಅಗತ್ಯ ಇರುವವರಿಗೆ ನೀಡುತ್ತಿವೆ. ಅಂಥ ಕೆಲವು ಸಂಸ್ಥೆಗಳೆಂದರೆ:

ದಿ ಚೆರಿಯನ್ ಫೌಂಡೇಷನ್: ಚೆನ್ನೈ ಮೂಲದ 'ಗಿಫ್ಟ್ ಹೇರ್ ಮತ್ತು ಗಿಫ್ಟ್ ಕಾನ್ಫಿಡೆನ್ಸ್' ಎಂಬ ಅಭಿಯಾನದ ಮೂಲಕ ದೇಶಾದ್ಯಂತ ಕ್ಯಾನ್ಸರ್‌ನಿಂದ ಬಳಲುತ್ತಿರುವ ಬಡ ಮಹಿಳೆಯರಿಗೆ ಸಹಾಯಹಸ್ತ ಚಾಚುವ ಹಾಗೂ ಆತ್ಮವಿಶ್ವಾಸ ತುಂಬುವ ಕೆಲಸ ಮಾಡುತ್ತಿದೆ. ಫೋನ್: 044 39278133

ಶಂಕರ ಕ್ಯಾನ್ಸರ್ ಆಸ್ಪತ್ರೆ: ಬೆಂಗಳೂರಿನ ಈ ಆಸ್ಪತ್ರೆ ಕ್ಯಾನ್ಸರ್ ಚಿಕಿತ್ಸೆ ಪಡೆದ ಮಹಿಳೆಯರಿಗೆ ವಿಗ್ ನೀಡುವ ಕೆಲಸವನ್ನೂ ಮಾಡುತ್ತಿದೆ. ಫೋನ್: 080–26981000

ಅಮೆರಿಕನ್ ಕ್ಯಾನ್ಸರ್ ಸೊಸೈಟಿ: ವಿಶ್ವದಾದ್ಯಂತ ದೊಡ್ಡ ಮಟ್ಟದಲ್ಲಿ ವಿಗ್ ಬ್ಯಾಂಕ್ ಅನ್ನು ನಿರ್ವಹಿಸುತ್ತಿದೆ. ಇದು ಕ್ಯಾನ್ಸರ್ ಚಿಕಿತ್ಸೆಗೆ ಒಳಗಾಗುವ, ಅಗತ್ಯವಿರುವ ರೋಗಿಗಳಿಗೆ ವಿಗ್‌ಗಳನ್ನು ಒದಗಿಸುತ್ತದೆ. ಫೋನ್: 1–800–227–2345

## ಕೇಶದಾನಕ್ಕೆ ರಿಜಿಸ್ಟರ್ ಮಾಡಿಸಿಕೊಳ್ಳಿ...

ಬೆಂಗಳೂರು ಹೇರ್ ಫೌಂಡೇಷನ್: ದಾನಿಗಳಿಂದ ತಲೆಗೂದಲು ಪಡೆದು ವಿಗ್ ತಯಾರಿಸಿ ಕ್ಯಾನ್ಸರ್‌ನಿಂದ ಕೇಶ ಕಳೆದುಕೊಂಡ ಮಹಿಳೆಯರಿಗೆ ನೀಡುತ್ತದೆ.

'ಗಿವ್ ಹೇರ್, ಗಿವ್ ಜಾಯ್' – ಇದು ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸ್ಲೋಗನ್. ಕ್ಯಾನ್ಸರ್‌ನಿಂದ ಗುಣಮುಖರಾದವರಿಗೆ ತಲೆಗೂದಲು ಇಲ್ಲದೆ ಅನುಭವಿಸುವ ಮುಜುಗರವನ್ನು ತಪ್ಪಿಸಿ, ಅವರೂ ಎಲ್ಲರಂತೆ ಎಂಬ ಭಾವನೆ ಮೂಡಿಸುವ ಸಲುವಾಗಿ ಈ ಸಂಸ್ಥೆ ದಾನಿಗಳಿಂದ ತಲೆಗೂದಲು ಸಂಗ್ರಹಿಸುತ್ತದೆ. ಇಲ್ಲಿ ತಲೆಗೂದಲು ದಾನ ಮಾಡಬೇಕಾದರೆ ಕೂದಲ ಗುಣಮಟ್ಟ, ಬಣ್ಣ, ಉದ್ದ ಯಾವುದನ್ನೂ ಪರಿಗಣಿಸುವುದಿಲ್ಲ. ಯಾರು ಬೇಕಾದರೂ ದಾನ ಮಾಡಬಹುದು. ಆದರೆ ದಾನ ಮಾಡುವ ಮೊದಲು ಮೊಬೈಲ್ ವಾಟ್ಸಾಪ್ ಸಂಖ್ಯೆ 7349190758 ಗೆ ರಿಜಿಸ್ಟರ್ ಮಾಡಿಕೊಳ್ಳಬೇಕು. ಫೇಸ್‌ಬುಕ್‌ನಲ್ಲಾದರೆ @ **blrhairdonation** ಇಲ್ಲಿ ಹೆಸರು, ವಿವರಗಳನ್ನು ದಾಖಲಿಸಬೇಕು.

ಜಿಎಸ್‌ಎಸ್ ಅವರ 'ಜಡೆ' ಕವಿತೆ ನೆನಪಾಗುವುದು ಹೀಗೆ:

ವಿಶ್ವವನೆ ವ್ಯಾಪಿಸುತ ತುಂಬಿರುವ ಜಡೆ  
ಗಾನಗಳ, ಕಾವ್ಯಗಳ ಶಿಲ್ಪಗಳ ಕಲೆಯ ಜಡೆ  
ಎಲ್ಲವೂ ರಮ್ಯವೆಲ್ಲ!  
ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ  
ಇಂದಿಗೂ ಕಾಣದಲ್ಲ.

ಜಡೆಯೆನ್ನುವುದು ಸೌಂದರ್ಯದ ಸಂಕೇತ, ನಿಜ. ಆದರೆ, ಆ ಜಡೆಯ ತಾಯ ಮುಖದಲ್ಲಿ ಏನೆಲ್ಲ ಭಾವಗಳಿರಬಹುದು? ಅದನ್ನು ತಿಳಿಯುವ ಪ್ರಯತ್ನ ಮಾಡುವುದು ಹೇಗೆ? ಅಂಥದೊಂದು ಪ್ರಯತ್ನ, ಕೇಶದಾನ.

ಪ್ರತಿಕ್ರಿಯಿಸಿ: **feedback@sudha.co.in**

## ವಿಗ್ ಬಳಸಿದರೆ ಮನಸ್ಸಿಗೆ ಸಮಾಧಾನ



ಕ್ಯಾನ್ಸರ್ ಚಿಕಿತ್ಸೆಯ ಭಾಗವಾದ ಕಿಮೋಥೆರಪಿಯಿಂದ ಸಾಕಷ್ಟು ಕೂದಲು ಉದುರುತ್ತೆ. ಚಿಕಿತ್ಸೆ ಪಡೆಯುವಾಗ ಅದರ ಬಗ್ಗೆ ಅಷ್ಟೊಂದು ಗಮನ ಕೊಡಲಿಲ್ಲ. ಮೊದಲು ಗುಣ ಆಗಲಿ ಎಂಬುದರ ಬಗ್ಗೆಯೇ ಯೋಚನೆ ಇತ್ತು. ಆದಾದ ಮೇಲೆ ಹೊರಗೆ ಹೋಗುವಾಗ ಎಲ್ಲರೂ ಕೇಳಲು ಶುರು ಮಾಡಿದ್ರು, ಏನಾಯ್ತು, ಹುಷಾರಿಲ್ವ, ದೇವರಿಗೆ ಹೋಗಿ ಮುಡಿಕೊಟ್ಟಿದ್ಯ... ಇಂಥವೇ ಪ್ರಶ್ನೆಗಳನ್ನು ಕೇಳುವಾಗ ಮನಸ್ಸಿಗೆ ತುಂಬ ಬೇಜಾರು ಆಗೋದು. ನಾನು ಹೊನ್ನಾವರದ ಐಟಿಐ ಕಾಲೇಜಿನಲ್ಲಿ ಉಪನ್ಯಾಸಕಿ. ಇಲ್ಲಿ ಪಾಠ ಮಾಡುವಾಗ ಮಕ್ಕಳು ನನ್ನ ಪಾಠದ ಬಗ್ಗೆ ಗಮನಹರಿಸುವ ಬದಲಿಗೆ ತಲೆಯನ್ನೇ ನೋಡಲು ಶುರು ಮಾಡಿದ್ರು. ಹೀಗಾಗಿ ನಾನು ವಿಗ್ ತಗೊಂಡು ಬಳಸಲು ಆರಂಭಿಸಿದೆ. ಈಗ ಪ್ರಶ್ನೆ ಕೇಳುವವರು ಸುಮ್ಮನಾಗಿದ್ದಾರೆ ಎನ್ನುವುದು ಸಮಾಧಾನ.

ನನ್ನ ಪತಿಗೆ ತುಂಬ ಬೇಜಾರಾಗಿತ್ತು, ಎಷ್ಟು ಚಂದದ ಕೂದಲು ಹೋಯ್ತಲ್ಲ ಅಂತ. ಆಮೇಲೆ ವಿಗ್ ಹಾಕಿದ ಮೇಲೆ ಅವರಿಗೂ ತುಂಬ ಖುಷಿ ಆಯ್ತು. 'ಎಷ್ಟು ಚೆನ್ನಾಗಿ ಕಾಣಿಸ್ತಾ ಇದ್ಯ, ಮೊದಲಿನ ಹಾಗೆ, ನೀನು ವಿಗ್ ಹಾಕಿರೋದು ಗೊತ್ತೇ ಆಗಲ್ಲ, ರಿಯಲ್ ಹೇರ್ ತರನೇ ಇದೆ' ಅಂತ ಹೇಳಿದ್ರು. ಆಗ ನನಗೆ ಖುಷಿ ಆಯ್ತು.

ವಿಗ್ ಬಳಸುವಾಗ ಕಿರಿಕಿರಿ ಅನಿಸುತ್ತೆ. ಸಂಜೆ ಮನೆಗೆ ಬಂದು ಬಿಚ್ಚಿಟ್ಟರೆ ಸಾಕು ಅಂತ ಅನ್ನಿಸುತ್ತೆ. ಆದರೆ, ಕನ್ನಡಿ ಮುಂದೆ ನಿಂತಾಗ ತಲೆತುಂಬ ಕೂದಲು ಇರುವುದನ್ನು ಕಂಡು ನನಗೇ ಖುಷಿ ಆಗುತ್ತೆ.

ಒಂದು ಘಟನೆ ಈಗ ನೆನಪಿಗೆ ಬರುತ್ತೆ. ಕಿಮೋಥೆರಪಿ ನೀಡಿ ಕೂದಲು ಉದುರಲು ಆರಂಭವಾದಾಗ ನನಗೆ ಆತಂಕ ಆಗ್ತಿತ್ತು. ಎಲ್ಲ ಕೂದಲು ಉದುರಿ ಬೋಳಾದರೆ ಹೇಗಪ್ಪ ಅಂತ. ಅದೇ ಸಮಯದಲ್ಲಿ ಒಂದು ದಿನ ನನ್ನ ಅತ್ತೆ ತಲೆಬಾಚುತ್ತಿರುವಾಗ ರಸ್ತೆಬದಿಯಲ್ಲಿ ಯಾರೋ ಒಬ್ಬ ಹೆಂಗಸು ಬಂದು 'ಕೂದಲಿಗೆ ಪಾತ್ರೆ...' ಅಂತ ಕೇಳ್ಕೊಂಡು ಬಂದ್ಲು. ಅವಳಿಗಾದ್ರೂ ಉಪಯೋಗ ಆಗ್ಲಿ ಅಂತ ನಾನು ನನ್ನ ಇಡೀ ತಲೆಗೂದಲನ್ನು ಕತ್ತರಿಸಿ ಕೊಟ್ಟೆ. ಅದರ ಬದಲಿಗೆ ಸಿಕ್ಕಿದ ಪಾತ್ರೆಯನ್ನು ಅಜ್ಜಿ ಮನೆಗೆ ಕೊಟ್ಟೆ. ಈಗಲೂ ಅದನ್ನು ನೆನಪಿಸಿಕೊಂಡು ನಗು ಬರುತ್ತೆ.

**–ವೀಣಾ ಹುಬ್ಬಳ್ಳಿ, ಉಪನ್ಯಾಸಕಿ**